1	2	3
BW15a	Link Road fromMalleswaram circle to Seshadripuram Road	0.8
BW16a	Kumarakrupa Road-from Race course to K.K.Guest House	0.7
BW20a	Sagar Talkies to Central Jail Kanakadasa Road	0.7
BW17a	II Cross, Gandhinagar to Central Jail	0.7
BW22a	Anandarao Circle to KG Circle	0.6

ಬೆಂಗಳೂರು ಕೇಂದ್ರ ಕಾರಾಗೃಹ ಸ್ಥಳಾಂತರ

2850(3632) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ಹೊಸೂರು ರಸ್ತೆಯಲ್ಲಿ ನಿರ್ಮಿಸಿರುವ ಹೊಸ ಕಾರಾಗೃಹಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಈ ಕೇಂದ್ರ ಕಾರಾಗೃಹವನ್ನು ಅಪೂರ್ಣವಾಗಿ ಯಾವಾಗ ಸ್ಥಳಾಂತರಿಸಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು)

ಅ) ಸನ್ಮಾನ್ಯ ಮುಖ್ಯಮಂತ್ರಿಗಳು ಗಾಂಧೀನಗರ ಬೆಂಗಳೂರು ಕೇಂದ್ರ ಕಾರಾಗೃಹವನ್ನು ಪೂರ್ಣ ಪ್ರಮಾಣದಲ್ಲಿ ಪರಪ್ಪನ ಅಗ್ರಹಾರ ನೂತನ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವುದಾಗಿ ಆಯವ್ಯಯ ಭಾಷಣದಲ್ಲಿ ಸೂಚಿಸಿದಂತೆ ಅವಶ್ಯಕವಾದ ಕಾಮಗಾರಿಗಳನ್ನು ಅದ್ಯತೆಯ ಮೇಲೆ ಲೋಕೋಪಯೋಗಿ ಇಲಾಖೆಯಿಂದ ತೆಗೆದುಕೊಳ್ಳಲಾಗಿದೆ. ಬಂದಿಗಳನ್ನು ಕೆಲಸದಲ್ಲಿ ನಿಯೋಜಿಸಲು ಅವಶ್ಯಕವಾಗಿ ವರ್ಕ್‌ಶೆಡ್ ನಿರ್ಮಾಣ, ಬ್ಯಾಂಡಿಸಾ ಮೆಶೀನ್ ಷೆಡ್ ನಿರ್ಮಾಣ, ನೀರಿನ ಸೌಲಭ್ಯ, ಆರ್.ಸಿ.ಸಿ. ಓವರ್‌ಹೆಡ್ ಟ್ಯಾಂಕ್ ಬಯಲು ರಂಗಮಂದಿರ, 6 ಚಿಕ್ಕ ಕಾವಲು ಗೋಪುರಗಳ ನಿರ್ಮಾಣ, ಸಿ.ಸಿ.ಟಿ.ವಿ.ಸಿಸ್ಟಂ, ವೈರ್‌ಫೆನ್ಸ್ ಪಬ್ಲಿಕ್ ಅಡ್ರಸ್ ಸಿಸ್ಟಮ್ ಇತ್ಯಾದಿ 316.93 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು ಕೆಲಸ ಭರದಿಂದ ಸಾಗುತ್ತಿದೆ.

ಆ) ಪ್ರಸಕ್ತ ಸಾಲಿನ ಡಿಸೆಂಬರ್‌ಕೊನೆಯ ವಾರದಲ್ಲಿ ಸ್ಥಳಾಂತರಿಸಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ.

ದೇವನಹಳ್ಳಿ ಬಳಿ ನಿರ್ಮಿಸಲಾಗುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

2851 (3638) ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಮೂಲ ಭೂತ ಸೌಲಭ್ಯ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ದೇವನಹಳ್ಳಿ ನಿರ್ಮಿಸಲಾಗುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಟೆಂಡರ್ ನೀಡುವ ಕಾರ್ಯ ಮುಕ್ತಾಯವಾಗಿದೆಯೆ?

2. ಹಾಗಿದ್ದಲ್ಲಿ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿಲಾಗುವುದು.

3. ಇದಕ್ಕಾಗಿ ಬೇಕಾಗುವ ಸರ್ಕಾರಿ ಹಾಗೂ ಖಾಸಗೀ ಜಮೀನೆಷ್ಟು;

4. ಈ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳವ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು)

1. ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಜಂಟೀ ವಲಯದ ಪಾಲುದಾರರ ಆಯ್ಕೆ ಮಾಡುವ ಸಲುವಾಗಿ ಅಂತರರಾಷ್ಟ್ರೀಯ ಟೆಂಡರ್‌ಗಳನ್ನು ಕರೆಲಾಗಿತ್ತು, ಆಯ್ಕೆ ಕಾರ್ಯಾಚರಣೆಯು ಈ ಗಾಗಲೂ ಸಹ ಮುಂದುವರೆದಿದೆ.

2. ಜಂಟಿ ವಲಯದ ಪಾಲುದಾರರ ಆಯ್ಕೆಯಾದ ನಂತರದ 86 ಬೆಂಗಳೂರಿಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವ ನಿರೀಕ್ಷೆಯಿದೆ.

3. ಬೆಂಗಳೂರಿನ ದೇವನಹಳ್ಳಿ ಸಮೀಕ್ಷೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಸುಮಾರು 1276 ಎಕರೆ ಜಮೀನನ್ನು ಗುರುತಿಸಲಾಗಿದೆ. ಇದರಲ್ಲಿ ಸುಮಾರು 1803 ಎಕರೆಯಷ್ಟು ಸರ್ಕಾರಿ ಜಮೀನನ್ನು ಅರಣ್ಯ ಜಮೀನನ್ನು ಒಳಗೊಂಡು) ಉಳಿದ 2473 ಎಕರೆ ಖಾಸಗಿ ಜಮೀನಾಗಿರುತ್ತದೆ.

4. ಕೆಐ ಎಡಿ ಎಡಿ ಆಕ್ಟ್ ಪ್ರಕಾರ ಬೇಕಾದ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದು ಜಮೀನಿನ ಸ್ವಾಧೀನ ಕಾರ್ಯ ಕೊನೆಯ ಹಂತದಲ್ಲಿದೆ.

ಹುಲಸೂರು ವಿಧಾನಸಭಾಕ್ಷೇತ್ರದ ಪೋಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಹುದ್ದೆಗಳ ಭರ್ತಿ

2852(3572):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹುಲಸೂರು ಹಳ್ಳಿಖೇಡ್ ಮತ್ತು ಖಟಕ್ ಚಿರಜೂಳಿ ಗ್ರಾಮಗಳಲ್ಲಿ ಇರುವ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳು ಖಾಲಿ ಇದ್ದಲ್ಲಿರುವ ಪಿ.ಎಸ್.ಐ. ಗಳು ಪ್ರಭಾರದಲ್ಲಿರುವುದು (ಇನ್‌ಚಾರ್ಜ್) ನಿಜವಲ್ಲವೇ;

ಆ) ಹಾಗಿದ್ದಲ್ಲಿ ಮೇಲ್ಕಂಡ ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು (ರೆಗ್ಯುಲರ್) ತುಂಬಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಮಲ್ಲಿಕಾಜುನ ಎಂ.ಖರ್ಗೆ (ಗೃಹ ಸಚಿವರು)

ಅ) ಪಿ.ಎಸ್.ಐ. ಹುದ್ದೆಗಳು ಖಾಲಿಯಿದ್ದು ಎ.ಎಸ್.ಐ.ಗಳು ಪ್ರಭಾವದಲ್ಲಿದ್ದಾರೆ.

ಆ) ಬೀದರ್ ಜಿಲ್ಲೆಯಲ್ಲಿ 11 ಪೊಲೀಸ್ ಇನ್ಸ್‌ಪೆಕ್ಟರ್‌ಗಳು ತರಬೇತಿಯಲ್ಲಿದ್ದು ಅವರ ತರಬೇತಿ ಅವಧಿ ಮುಗಿದ ತಕ್ಷಣ ಅವರನ್ನು ಖಾಲಿ ಹುದ್ದೆಗಳಿರುವ ಪೊಲೀಸ್ ಠಾಣೆಗಳಿಗೆ ವರ್ಗ ಮಾಡಲಾಗುವುದು.